(ಸದನವು ಭೋಜನವಿರಾಮಕ್ಕೆಂದು ಮಧ್ಯಾಹ್ನ 2.00 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ 3.00 ಗಂಟೆಗೆ ಸೇರುವುದಾಗಿ ನಿರ್ಣಯಿಸಿತು)

ಸಭೆಯು ಮಧ್ಯಾಹ್ನ 3 ಗಂಟೆ 12 ನಿಮಿಷಕ್ಕೆ ಪುನರಾರಂಭಗೊಂಡಿತು
ಮಾನ್ಯ ಉಪಾಧ್ಯಕ್ಷರು (ಶ್ರೀ ಎನ್. ವೈ. ಗೋಪಾಲಕೃಷ್ಣರವರು) ಅಧ್ಯಕ್ಷ ಪೀಠದಲ್ಲಿದ್ದರು.

5. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಪ್ರಶ್ನೋತ್ತರ ವೇಳೆಗೆ ಪ್ರಾಮುಖ್ಯತೆ ಕೊಡುವ ಬಗ್ಗೆ

ಉಪಾಧ್ಯಕ್ಷರು : ಮೊದನೇ ಪ್ರಶ್ನೆ ಸಿ. ಟಿ. ರವಿ ಅವರದ್ದು; ಆದರೆ ಸಚಿವರು ಬಂದಿಲ್ಲ ಆಮೇಲೆ ಕೇಳಿ. ಎರಡನೇ ಪ್ರಶ್ನೆ ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ–ಆಬ್ಸೆಂಟ್. ಶ್ರೀ ಚರಂತಿಮದ್ ವೀರಣ್ಣ ಚಂದ್ರಶೇಖರಯ್ಯ–ಆಬ್ಸೆಂಟ್, ಶ್ರೀ ಪದ್ಮನಾಭ ಕೊಟ್ಟಾಗಿರಿ–ಆಬ್ಸೆಂಟ್

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಪ್ರಶ್ನೋತ್ತರ ವೇಳೆಯ ಶಕ್ತಿ, ಹಾಗೂ ಮಹತ್ವ ಹೋಗುತ್ತಾ ಇದೆ. ಯಾವಾಗಲೂ ಬೆಳಿಗ್ಗೆ ಬಂದ ತಕ್ಷಣ ಪ್ರಶ್ನೋತ್ತರ ಮುಗಿಸಬೇಕಾಗಿತ್ತು. ಸದನದ ಸದಸ್ಯರಿಗೆ ಪ್ರಶ್ನೆಗಳು ಬಹಳ ಪ್ರಾಮುಖ್ಯ. ಸರ್ಕಾರದ ಉತ್ತರ, ಅದರ ಮೇಲೆ ಉಪಪ್ರಶ್ನೆ ಕೇಳುವುದು, ಬೆಳಕು ಚೆಲ್ಲುವುದು ಬಹಳ ಪ್ರಾಮುಖ್ಯ. ನೀವು ಪ್ರಶ್ನೋತ್ತರವನ್ನು 3 ಗಂಟೆಗೆ ರಾತ್ರಿ 9, 12 ಗಂಟೆಗೆ ತೆಗೆದುಕೊಳ್ಳುವುದು ನನಗೆ ಅರ್ಥವಾಗುತ್ತಿಲ್ಲ. ಇದಕ್ಕೊಂದು ನಿರ್ಧಾರವಾಗಬೇಕು. ಪ್ರಶ್ನೋತ್ತರ ಸದಸ್ಯರ ಹಕ್ಕು; ಕಾಲಕ್ಕೆ ತಕ್ಕಂತೆ ಪ್ರಶ್ನೋತ್ತರ ನಡೆದರೆ ಅದು ಗಾಂಭೀರ್ಯ. ಸದಸ್ಯರ ಹಕ್ಕು ಸಂಪೂರ್ಣ ಮೊಟಕಾಗುತ್ತಿದೆ. ಇದು ಒಳ್ಳೆಯ ಸೂಚನೆಯಲ್ಲ.

ಶ್ರೀ ಆರ್. ವಿ. ದೇಶಪಾಂಡೆ (ಸಹಕಾರ ಸಚಿವರು) : ಪ್ರಶ್ನೆಗಳು ಮಹತ್ವದವು ಎಂಬುದರ ಬಗ್ಗೆ ಪ್ರಶ್ನೆನೆ ಇಲ್ಲ. ಅದು ನಿಮ್ಮ ಹಕ್ಕು. ಅದೇ ಪ್ರಕಾರ ಡಿಮ್ಯಾಂಡೂ ಪಾಸಾಗಬೇಕು, ಪಾಸಾಗಲಿಲ್ಲ ಅಂದರೆ ನಾಳೆ ಸಂಬಳ ಸಿಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಚರ್ಚೆಯಾಗದಿದ್ದರೂ ಬೇಡಿಕೆಗಳನ್ನು ಮತಕ್ಕೆ ಹಾಕಬಹುದು ಆದರೆ ಈ ಪ್ರಶ್ನೆಗಳು ಸುಮ್ಮಸುಮ್ಮನೆ ಬರುವಂಥದಲ್ಲ, ನಾವು ಪ್ರಶ್ನೆ ಕಳುಹಿಸಿದ ಮೇಲೆ ಅದೃಷ್ಟ ಹೊಡೆಯಬೇಕು. ಒಂದು ಚುಕ್ಕೆರಹಿತ ಮತ್ತೊಂದು ಇಲ್ಲಿ ಉತ್ತರಿಸುವಂಥದ್ದು ತಾವು ಅದನ್ನು ಲಾಟರಿ ಎತ್ತುವಂಥದ್ದು ಆ ಲಾಟರಿಯಲ್ಲಿ ನಮಗೆ ಅದೃಷ್ಟ ಹೊಡೆಯಬೇಕು. ನಾವು ಕೇಳಬೇಕೆಂದು ಬಂದರೆ ದುರಾದೃಷ್ಟ ಮಂತ್ರಿ ಇರಲಿಲ್ಲ ಅಂದರೆ ನಮ್ ಹಣೆಬರಹ ನೆಟ್ಟಗಾಗಿ ಹೋಯಿತು. ಪ್ರಜಾತಂತ್ರವ್ಯವಸ್ಥೆಯಲ್ಲಿ ಇವೆಲ್ಲಾ ಅದೃಷ್ಟದ ಮೇಲೆ ಇತ್ತೀಚೆಗೆ ತೀರ್ಮಾನ ಆಗುತ್ತಿರುವುದು. ದಯವಿಟ್ಟು ಪ್ರಶ್ನೋತ್ತರ ಕಾರ್ಯಕ್ರಮ ಮಾತ್ರ ನಿಗದಿತ ಕಾಲದಲ್ಲಿ ಆಗಬೇಕು. ಇದಕ್ಕೆ ದೇಶಪಾಂಡೆಯವರೇ, ದಯವಿಟ್ಟು ಒಪ್ಪಬೇಕಾಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ : ಪ್ರಶ್ನೆ ಎತ್ತ ಬಾರದು ಉತ್ತರ ಕೊಡಬಾರದು ಅಂತ ಅಲ್ಲ ಹಲವಾರು ಬಾರಿ ತಾವೂ ಟೀಕೆಟಿಪ್ಪಣಿ ಮಾಡಿದ್ದೀರಿ, ಡಿಮ್ಯಾಂಡ್ಸ್ ಹಾಗೇಹೋಯಿತು, ಚರ್ಚೇನೇ ಆಗಿಲ್ಲ ಅಂತ. ಡಿಮ್ಯಾಂಡ್ ಚರ್ಚೆಯಾದಾಗ ಪ್ರತಿಯೊಂದು ಡಿಮಾಂಡ್ ಮೇಲೆ ತಾವು ಬೆಳಕು ಚೆಲ್ಲಬಹುದು. ಬಿಸಿನೆಸ್ ಅಡ್ವೈಸರಿಯಲ್ಲಿ ತೀರ್ಮಾನವಾದ ಹಾಗೆ ಈಗ ನಡೆಯುತ್ತಿದೆ.